ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ರೈತರ ಸಾಲಮನ್ನಾ ಮಾಡುವ ಬಗ್ಗೆ

ಶ್ರೀ ಐವಾನ್ ಡಿ'ಸೋಜ (ನಾಮನಿರ್ದೇಶನ ಹೊಂದಿದವರು):-

190 (272) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2017-18, 2018-19ರಲ್ಲಿ ರಾಜ್ಯದಲ್ಲಿ ಎಷ್ಟು ಮಂದಿ ರೈತರಿಗೆ ಸಾಲಮನ್ನಾ ಮಾಡಲಾಗಿದೆ; ಎಷ್ಟು ಮಂದಿ ರೈತರು ಸಾಲಮನ್ನಾ ಯೋಜನೆ ಅನ್ವಯ ಅರ್ಹರಾಗಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)

(ಆ) ರೈತರ ಸಾಲಮನ್ನಾ ಯೋಜನೆಯಡಿಯಲ್ಲಿ ಸಹಕಾರಿ ಸಂಘಗಳಲ್ಲಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಾವತಿಸಿದ ಮೊತ್ತ ಎಷ್ಟು;

(ಇ) 2019-20ನೇ ಸಾಲಿನಲ್ಲಿ ರೈತರ ಸಾಲವನ್ನು ಮನ್ನಾ ಮಾಡಲಾಗಿದೆಯೇ; 2018-19, 2019-20ರಲ್ಲಿ ಸಾಲಮನ್ನಾ ಮಾಡಿ ಮೊತ್ತವನ್ನು ಯಾವ ಮಾನದಂಡದ ಮೇಲೆ ನೀಡಲಾಗಿದೆ;

(ಈ) ಕೇಂದ್ರ ಸರ್ಕಾರ ನೀಡುತ್ತಿರುವ ರೈತರಿಗೆ ವರ್ಷಕ್ಕೆ ಪ್ರೋತ್ಸಾಹ ಧನ ರೂ. 6,000/-ಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಕೇಂದ್ರ ಸರ್ಕಾರದ ಯೋಜನೆಯ ಒಟ್ಟು ಫಲಾನುಭವಿಗಳೆಷ್ಟು; ಅರ್ಜಿದಾರರಿಗೆ ಎಷ್ಟು ಪಾವತಿಸಲಾಗಿದೆ; (ವಿವರ ನೀಡುವುದು)

(ಉ) 2018-19, 2019-20ರಲ್ಲಿ ಸಾಲಭಾದೆಯನ್ನು ತಡೆಯಲಾಗದೇ ಮೃತಪಟ್ಟ ರೈತರ ಸಂಖ್ಯೆ ಎಷ್ಟು; ಅವರ ಕುಟುಂಬಗಳಿಗೆ ನೀಡಿದ ಪರಿಹಾರ ಎಷ್ಟು; ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡಲಾಗಿದೆಯೇ? (ವಿವರ ನೀಡುವುದು)